೭. ನಾಡ ಕಚೇರಿಗಳನ್ನು ಪಿರ್ಕಾದ ಮಧ್ಯಭಾಗದಲ್ಲಿ ತೆರೆಯುವುದು ಮತ್ತು ಸಿಬ್ಬಂದಿಯನ್ನು ಒದಗಿಸುವುದು

ಶ್ರೀ ಕೆ. ವಸಂತ ಬಂಗೇರ.—ಸರಕಾರದ ರಾಜ್ಯದ ಪ್ರತಿ ತಾಲ್ಲೂಕು ಕೇಂದ್ರಕ್ಕೆ ದೂರವಿರುವ ಹೋಬಳಿಗಳಲ್ಲಿ ಬಡ ಜನರ ಉಪಕಾರಕ್ಕಾಗಿ ''ನಾಡಕಚೇರಿ'' ತೆರೆದಿದ್ದು ನಿಜವಷ್ಟೇ, ಈ ನಾಡ ಕಚೇರಿಯಿಂದ ಬಡ ಜನರಿಗೆ ಆಗುವ ಉಪಕಾರದಿಂದ ಉಪಕಾರವೇ ಜಾಸ್ತಿಯಾಗಿದೆಯೆಂಬುದು ಸರಕಾರದ ಗಮನಕ್ಕೆ ಬಂದಿದೆಯೇ? ನಾಡ ಕಚೇರಿಗಳನ್ನು ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ನಲ್ಲಿ ತೆರೆದಿರುತ್ತೀರಿ ಇದರಿಂದಾಗಿ ಪಿರ್ಕಾದ ಒಂದು ಭಾಗದವರಿಗೆ ನಾಡ ಕಚೇರಿಯಿಂದ ತಾಲ್ಲೂಕು ಆಫೀಸು ಹತ್ತಿರವಾಗಿದ್ದರೂ ಕೂಡ ಆವರೆಲ್ಲಾ ಸುತ್ತಿ ಬಳಸಿ ನಾಡ ಕಚೇರಿಗೆ ಹೋಗಬೇಕಾಗಿದೆ, ಇದರ ಬದಲಾಗಿ ನಾಡ ಕಚೇರಿಯನ್ನು ಪ್ರತಿ ಪಿರ್ಕಾದ ಮಧ್ಯಭಾಗದಲ್ಲಿ ತೆರೆದರೆ ಅನುಕೂಲ. ಇಲ್ಲವಾದಲ್ಲಿ ಪಿರ್ಕಾದ ಇನ್ನೊಂದು ಭಾಗದವರಿಗೆ ನೇರವಾಗಿ ತಾಲ್ಲೂಕು ಆಫೀಸಿನ ಸೌಲಭ್ಯವನ್ನು ಒದಗಿಸುವುದು. ಹೆಚ್ಚಿನ ಜನ ಎಲ್ಲಾ ಕಡೆ ನಾಡ ಕಚೇರಿಗೆ ಬೇಕಾದ ಸಿಬ್ಬಂದಿಯನ್ನು ತಾಲ್ಲೂಕು ಕಚೇರಿಯಿಂದಲೇ ಕಳುಹಿಸಲಾಗಿದೆ. ಇದರಿಂದಾಗಿ ಎರಡೂ ಕಚೇರಿಗಳಲ್ಲೂ ಕೂಡ ಕೆಲಸ ನಡೆಯದಂತಾಗಿದೆ. ಶೀಘ್ರವಾಗಿ ನಾಡ ಕಚೇರಿಯ ಹುದ್ದೆಗಳನ್ನು ಭರ್ತಿ ಮಾಡಿ ಎರಡೂ ಕಚೇರಿಗಳಲ್ಲೂ ಕೆಲಸ ನಡೆಯುವಂತೆ ಮಾಡಬೇಕಾಗಿ ವಿನಂತಿ. ಅಲ್ಲದೆ ನಾಡ ಕಚೇರಿಯ ಉಪ ತಹಸೀಲ್ದಾರರಿಗೆ, ತಾಲ್ಲೂಕು ಕಚೇರಿಯ ಉಪ ತಹಸೀಲ್ದಾರರ ಅಧಿಕಾರವೂ ಇಲ್ಲ. ಇದರಿಂದಾಗಿ ಪ್ರತಿಯೊಂದು ಕೆಲಸಕ್ಕೂ ತಾಲ್ಲೂಕು ಕಚೇರಿಗೆ ಬರಬೇಕಾದರೆ, ನಾಡ ಕಚೇರಿಯ ಅವಶ್ಯಕತೆ ಏನಿದೆ ? ಇದರಿಂದಾಗಿ ಅನಾವಶ್ಯಕವಾಗಿ ಜನರಿಗೆ ತೊಂದರೆ ಕೊಡುವ ಕಚೇರಿಗಳಾಗುತ್ತವೆ. ಅದಕ್ಕಾಗಿ ನಾಡ ಕಚೇರಿಗೆ ಈ ಕೆಳಕಂಡ ಅಧಿಕಾರಗಳನ್ನು ಕೊಡಿಸಬೇಕಾಗಿ ವಿನಂತಿಸುತ್ತೇನೆ.

೧. ಪಟ್ಟಾ ತಬ್ದೀಲು (ಮ್ಯುಟೇಶನ್ ಆರ್ಡರ್)

೨. ಆರ್. ಟಿ. ಸಿ. ನಕಲು ಕೊಡುವುದು

೩. ಜಾತಿ ಇತ್ಯಾದಿ ಬಗ್ಗೆ ದೃಢ ಪತ್ರ ಕೊಡುವುದು

೪. ಮನೆ ನಿವೇಶನ ಮಂಜೂರಾತಿ

೫. ಯಾವುದೇ ಮಂಜೂರು ನಕಲು, ನಕ್ಷೆ ತೊಡಗಿಸುವುದು

೬. ಆಕ್ರಮಣವನ್ನು ದಾಖಲಿಸಿ ಜುಲ್ಮಾನೆ ವಿಧಿಸುವುದು ಈ ರೀತಿ ತಾಲ್ಲೂಕು ಆಫೀಸಿನಲ್ಲಾ ಗುವ ಎಲ್ಲಾ ಕೆಲಸಗಳು ನಾಡ ಕಚೇರಿಯಲ್ಲಿಯೇ ಆಗುವಂತೆ ಅಧಿಕಾರವನ್ನು ಕೊಡಿಸಬೇಕಾಗಿ ಈ ಮೂಲಕ ವಿನಂತಿಸುತ್ತೇನೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸರ್ಕಾರವು ಅಧಿಕಾರ ವಿಕೇಂದ್ರೀಕರಣಗೊಳಿಸುವುದಕ್ಕಾಗಿ ಹಾಗೂ ಹೋಬಳಿ ಮಟ್ಟಗಳಲ್ಲಿ ಅಭಿವೃದ್ಧಿ ಆಡಳಿತವನ್ನು ಬಲಪಡಿಸುವ ಸಲುವಾಗಿ ತನ್ನ ಆದೇಶ ಆರ್‌ಡಿ ೯೫ ಎಸ್‌ಆರ್‌ಡಿ ೮೬ ದಿನಾಂಕ : ೧೪-೭-೧೯೮೬ ರ ಮೂಲಕ ಪ್ರತಿಯೊಂದು ತಾಲ್ಲೂಕಿನ ಒಂದೊಂದು ಹೋಬಳಿಯಲ್ಲಿ ನಾಡ ಕಚೇರಿಯನ್ನು ಪ್ರಾರಂಭಿಸುವ ಮೂಲಕ ಒಂದು ಮಹತ್ವ ಹೆಜ್ಜೆಯನ್ನು ಇಟ್ಟಿದೆ.

ನಾಡ ಕಛೇರಿ ಅಧಿಕಾರಿಗಳಿಗೆ ಈ ಕೆಳಕಂಡ ಅಧಿಕಾರಗಳನ್ನು ಪ್ರತ್ಯಾಯೋಜಿಸಲಾಗಿದ.

೧) ವೃದ್ಧಾಪ್ಯ ವೇತನ ಮಂಜೂರಾತಿ
೨) ಅಂಗವಿಕಲರಿಗೆ ಭತ್ಯ ಮಂಜೂರಾತಿ
೩) ವಿಧವಾ ವೇತನ
೪) ಸರ್ಕಾರಿ ಬಾಕಿ ವಸೂಲಾತಿ ಮತ್ತು ಜಮಾ ಹಾಗೂ ಡಿ. ಡಿ. ಬಿ. ಲೆಕ್ಕಗಳ ನಿರ್ವಹಣೆ
೫) ಪ್ರವಾಹ ಮತ್ತು ಬೆಂಕಿಯ ಅಪಘಾತಗಳಲ್ಲಿ ನೊಂದವರಿಗೆ ಮಂಜೂರಾಗಿರುವ ಪರಿಹಾರ ಧನ ನೀಡಿಕೆ
೬) ದೃಢೀಕರಣ ಪತ್ರ ನೀಡುವಿಕೆ.
೭) ಅಧಿಕೃತ ವ್ಯವಸಾಯ ಗಾರರಿಗೆ ದೃಢೀಕರಣ ಪತ್ರ ನೀಡುವಿಕೆ
೮) ಮಂಜರಾಯಿ ಸಂಸ್ಥೆಗಳ ನಿರ್ವಹಣೆ ಮತ್ತು ತನಿಖೆ.

೯) ದರಖಾಸ್ತು ರೆಕಾರ್ಡ್‌ಗಳ ತಯಾರಿಕೆ.
೧೦) ಗ್ರಾಮ ಲೆಕ್ಕಿಗರ ಮತ್ತು ಕಂದಾಯ ನಿರೀಕ್ಷರುಗಳ ಕಛೇರಿ ಮತ್ತು ದಫ್ತರ್ ಪುಸ್ತಕಗಳ ತನಿಖೆ.
೧೧) ಭೂ ಸ್ವಾಧೀನ ಪ್ರಕರಣಗಳ ಕಡತಗಳ ತಯಾರಿಕೆ.
೧೨) ಜನನ ಮತ್ತು ಮರಣಗಳ ದಾಖಲೆಗಳ ನಿರ್ವಹಣೆ
೧೩) ಗ್ರಾಮ ಲೆಕ್ಕಿಗರು ಮತ್ತು ಸ್ವಾಧೀನದಲ್ಲಿರುವ ಮಂತ್ರಿತರರಿಗೆ ಸಾಂಧರ್ಬಿಕ ರಜೆ ಮಂಜೂರು ಮಾಡುವ ಬಗ್ಗೆ.
೧೪) ಹಸಿರು ಮತ್ತು ಕಾವಿ ಪಡಿತರ ಕಾರ್ಡುಗಳ ನೀಡಿಕೆ.
೧೫) ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ದೃಢೀಕರಣ ಪತ್ರ ನೀಡುವಿಕೆ.
೧೬) ಗ್ರಾಮ ಲೆಕ್ಕಿಗರ ಕೈ ಪುಸ್ತಕದ ಪುಟ ೩ (೧೫) ರೀತ್ಯ ಗ್ರಾಮದ ಅಂಕಿ ಸಂಖ್ಯೆಗಳನ್ನು ನಾಡ ಕಛೇರಿಯಲ್ಲಿ ನಿರ್ವಹಿಸುವ ಬಗ್ಗೆ.
೧೭) ಪ್ರತಿ ವರ್ಷ ಹತ್ತು ಪ್ರತಿಶತಃ ಹಳ್ಳಿಗಳಲ್ಲಿ ೨ ಮುಖ್ಯ ಕಟಾವು ಪ್ರಯೋಗಗಳನ್ನು ಮಾಡುವುದು.
೧೮) ಕರ್ನಾಟಕ ಭೂ ಕಂದಾಯ ಸಂಹಿತೆಯ ೧೯೫೪ ರಡಿ ಈ ಕೆಳಕಂಡ ಹೆಚ್ಚಿನ ಅಧಿಕಾರಗಳನ್ನು ಪ್ರತ್ಯಾಯೋಜಿಸಲಾಗಿದೆ.

೧) ಪರಿಚ್ಛೇದ ೯೪ ; ಸರ್ಕಾರಿ ಭೂಮಿಯ ಅನಧಿಕೃತ ಆಕ್ರಮಣದ ಮೇಲೆ ದಂಡ ವಿಧಿಸುವುದು (ಟಿ.ಟಿ. ದಂಡ)

೨) ಪರಿಚ್ಛೇದ ೧೦೪ : ಸರ್ಕಾರಿ ಭೂಮಿಯ ಅನಧಿಕೃತ ಆಕ್ರಮಣಕಾರರನ್ನು ಎತ್ತಂಗಡಿ ಮಾಡುವುದು

೩) ಪರಿಚ್ಛೇದ ೧೨೭ : ತಕರಾರಿಲ್ಲದ ಮ್ಯುಟೇಶನ್ ಪ್ರಕರಣಗಳ ವಿಲೇವಾರಿ

೪) ಪರಿಚ್ಛೇದ ೧೩೯ : ತಕರಾರಾಗಿರುವ ಮ್ಯುಟೇಷನ್ ಪ್ರಕರಣಗಳ ವಿಲೇವಾರಿ

೫) ಪರಿಚ್ಛೇದ ೧೬೪ : ಚಿರಾಸ್ತಿಗಳ ಮಂಟ್ಪೂಗೋಲು ಮತ್ತು ಮಾರಾಟ.

ಪ್ರಸ್ತುತ ಮಾನ್ಯ ವಿಧಾನಸಭಾ ಸದಸ್ಯರು ನಾಡ ಕಛೇರಿಯನ್ನು ಹೋಬಳಿಯ ಮಧ್ಯ ಭಾಗದಲ್ಲಿ ತೆರೆಯುವಂತೆಯೂ, ಅವಶ್ಯಕ ಸಿಬ್ಬಂದಿಯನ್ನು ಒದಗಿಸಬೇಕಾಗಿಯೂ ಹಾಗೂ ಕೆಲವೊಂದು ಹೆಚ್ಚಿನ ಅಧಿಕಾರವನ್ನು ಪ್ರತ್ಯಾಯೋಜಿಸುವಂತೆ ಪ್ರಸ್ತಾಪಿಸಿದ್ದಾರೆ.

ಇದರ ಬಗ್ಗೆ ತಿಳಿಸುವುದೇನೆಂದರೆ ಸರ್ಕಾರ ನೀತಿಗನುಗುಣವಾಗಿ ಹೋಬಳಿ ಮಟ್ಟದಲ್ಲಿ ಹಾಲಿ ಯಿರುವ ಕಂದಾಯ ನಿರೀಕ್ಷಕರ ಕಾರ್ಯಾಲಯಗಳು ಕಾರ್ಯ ನಿರ್ವಹಿಸುತ್ತಿರುವ ಸ್ಥಳಗಳನ್ನೇ ಪರಿವರ್ತಿಸಿ ನಾಡ ಕಾರ್ಯಾಲಯಗಳನ್ನಾಗಿ ಸ್ಥಾಪಿಸಲಾಗಿದೆ. ಆದಕಾರಣ ಹೋಬಳಿಗಳ ಇತರೆ ಯಾವುದೇ ಭಾಗಕ್ಕೆ ವರ್ಗಾಹಿಸಲು ಅವಕಾಶವಿಲ್ಲ. ಆದಾಗ್ಯೂ ಕಸಬ ಹೋಬಳಿ ವಿನಃ ತಾಲ್ಲೂಕಿನ ಇತರೆ ಹೋಬಳಿಗಳಲ್ಲಿಯೂ ಹಂತ ಹಂತವಾಗಿ ನಾಡ ಕಛೇರಿಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯೂ ಸರ್ಕಾರದ ಪರಿಶೀಲನೆಯಲ್ಲಿದೆ.

ಸಿಬ್ಬಂದಿಗೆ ಸಂಬಂಧಿಸಿದಂತೆ ಗುಮಾಸ್ತ–ಬೆರಳಚ್ಚುಗಾರರ ಹುದ್ದೆಯನ್ನು ದಿನಗೂಲಿ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಗಿದೆ. ಇತರೆ ಸಿಬ್ಬಂದಿಗೆ ಸಂಬಂಧಿಸಿದಂತೆ ಸೂಕ್ತ ಬದಲಾವಣೆ ಮಾಡಿ ಎಲ್ಲ ಸಿಬ್ಬಂದಿ ವರ್ಗಗಳ ಹುದ್ದೆಯನ್ನು ದಿನಾಂಕ : ೧೫–೭–೧೯೮೬, ೧೬–೭–೧೯೮೬ ಮತ್ತು ೨೦–೭–೧೯೮೬ ರಂದು ನಡೆದ ವಿಭಾಗಾಧಿಕಾರಿಗಳ ಸಭೆಯಲ್ಲಿ ವಿಭಾಗಾಧಿಕಾರಿಗಳಿಗೆ ಅನುಭವವುಳ್ಳ ಮತ್ತು ಕಂದಾಯ ವಿಷಯ ಗಳಲ್ಲಿ ಪರಿಣಿತಿಯನ್ನು ಹೊಂದಿರುವ ಸೂಕ್ತ ಸಿಬ್ಬಂದಿಯನ್ನು ಅವಧಿಪೂರ್ವ ವರ್ಗಾವಣೆ ಮಾಡಿ

ಸಂಬುವಂತೆ ಅಧಿಕಾರವನ್ನು ನೀಡಲಾಗಿದೆ, ಹಾಗೆ ಸಿಬ್ಬಂದಿ ವರ್ಗವನ್ನು ಹೊಂದಿರುವ ಯಾವುದಾದರೂ ನಿರ್ದಿಷ್ಟ ನಾಡ ಕಛೇರಿಗಳನ್ನು ಸರ್ಕಾರದ ಗಮನಕ್ಕೆ ತಂದಲ್ಲಿ ಸೂಕ್ತ ವವಸ್ಥೆ ಮಾಡ ಲಾಗುವುದು.

ಮಾನ್ಯ ಸದಸ್ಯರು ಪ್ರತ್ಯಾಯೋಜಿಸಬೇಕೆಂದು ತಿಳಿಸಿರುವ ಕೆಲವೊಂದು ಅಧಿಕಾರಗಳನ್ನು ಈಗಾಗಲೇ ಪ್ರತ್ಯಾಯೋಜಿಸಲಾಗಿದೆ. ಸರ್ಕಾರವು ಸಹ ಈಗಾಗಲೇ ಪ್ರತ್ಯಾಯೋಜಿಸುವ ಅಧಿಕಾರಗಳು ಪೂರ್ಣ ಮಟ್ಟದ್ದಲ್ಲವೆಂದು ಗಮನಿಸಿರುವ ಕಾರಣ, ಮತ್ತಷ್ಟು ಅಧಿಕಾರಗಳನ್ನು ಪ್ರತ್ಯಾಯೋಜಿಸುವ ಬಗ್ಗೆ ಪರಿಶೀಲಿಸುತ್ತದೆ,

೮. ಭದ್ರಾವತಿಯ ಮೈಸೂರು ಕಾಗದದ ಕಾರ್ಖಾನೆಯ ನೌಕರರ ಸಂಘಕ್ಕೂ ಕಾರ್ಮಿಕರ ಸಂಘಕ್ಕೆ ಘರ್ಷಣೆಯಾಗಿರುವುದು

ಶ್ರೀ ಡಿ. ಜಿ ಬಸವನಗೌಡ.—ಭದ್ರಾವತಿಯಲ್ಲಿ ಮೈಸೂರು ಕಾಗದ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಘಕ್ಕೂ ಮತ್ತು ಕಾರ್ಮಿಕರ ಸಂಘಕ್ಕೂ ಘರ್ಷಣೆಯುಂಟಾಗಿ ಕಾರ್ಖಾನೆಯ ಕೆಲಸ ಕಾರ್ಯಗಳು ಸ್ಥಗಿತವಾಗಿದ್ದು ಉತ್ಪಾದನೆಗೆ ಧಕ್ಕೆಯಾಗಿದೆಯೆಂಬ ಶಂಖೆ ಸಾರ್ವಜನಿಕರಲ್ಲಿ ಮಾಡಿದ್ದು, ಪರಿಸ್ಥಿತಿ ಅಡಳಿತ ವರ್ಗದ ಹತೋಟಿಗೂ ಬಾರದೆ ವಿಕೋಪಕ್ಕೆ ಹೋಗಿದ್ದು, ಇಡೀ ಆವರಣ ಅಶಾಂತಿಯ ವಾತಾವರಣದಲ್ಲಿರುಲ್ಲಿ ಪ್ರಯುಕ್ತ ಸರ್ಕಾರ ಕೂಡಲೇ ಮಧ್ಯ ಪ್ರವೇಶಿಸಿ, ಪರಿಸ್ಥಿತಿಯನ್ನು ಹತೋಟಿಗೆ ತರುವ ಪ್ರಯತ್ನಪಡುವುದಲ್ಲದೆ, ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಮಾನ್ಯ ಅಧ್ಯಕ್ಷರ ಮೂಲಕ ಕೈಗಾರಿಕಾ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಸಚಿವರು).—ಮಾನ್ಯ ಸದಸ್ಯರು ಈ ಬಗ್ಗೆ ಏನು ಅನು ಮಾನ ವ್ಯಕ್ತಪಡಿಸಿದ್ದಾರೆ ಆ ಪ್ರದೇಶದಲ್ಲಿ ಅಶಾಂತಿ ವಾತಾವರಣ ಅಲ್ಲದೆ ಅಲ್ಲಿ ಆ ಪರಿಸ್ಥಿತಿ ಇಲ್ಲ ಎಂದು ಹೇಳುತ್ತೇನೆ. ಅಲ್ಲಿ ನೌಕರರ ಸಂಘ ಮತ್ತು ಆಫೀಸರ್ಸ್ ಅಸೋಸಿಯೇಷನ್ ಎಂದು ಏನು ಇವೆ ಅವರು ಕೆಲವೊಂದು ಬೇಡಿಕೆಗಳನ್ನು ಮ್ಯಾನೇಜ್‌ಮೆಂಟ್ ಎದುರಿಗೆ ಇಟ್ಟರು. ಆದರೆ ಅಲ್ಲಿರುವ ಆಫೀಸರ್ಸ್ ಅಸೋಸಿಯೇಷನ್ ಕಾರ್ಮಿಕರ ಹಾಗೆ ಟ್ರೇಡ್ ಯೂನಿಯನ್ ರೈಟ್ಸ್ ತರಹ ಇಲ್ಲ. ಅವರ ಬೇಡಿಕೆಗಳ ವಿವರಗಳಿಗೆ ನಾನು ಹೋಗುವುದಿಲ್ಲ. ಅಲ್ಲಿ ಆಡಳಿತ ವರ್ಗ ಏನು ಇದೆ ಈ ಬಗ್ಗೆ ಅವರೊಡನೆ ಸಾಕಷ್ಟು ಸಭ್ಯ ರೀತಿಯಲ್ಲಿ ಅವರು ವರ್ತಿಸಿಕೊಂಡು ಬಂದಿರುವುದು ಬಗ್ಗೆ ಅಲ್ಲಿರುವ ಆಫೀಸರ್ ಅಸೋಸಿಯೇಷನ್‌ನವರು ತಪ್ಪು ತಿಳಿದುಕೊಂಡಿದ್ದಾರೆ. ಅವರು ೨೬-೨-೮೭ ಮತ್ತು ೨೭-೨-೮೭ ಈ ಎರಡು ದಿನವೂ ಮಾಸ್ ಲೀವ್ ಹಾಗಿ ಪ್ರೊಟೆಸ್ಟ್ ಮಾಡಿದ್ದರೂ ಕೂಡ ಕಾರ್ಮಿಕರು, ಟೇಬರ್ ಯೂನಿಯನ್ನ್‌ನವರು ಅವರ ಮಾತನ್ನು ಕೇಳಲಿಲ್ಲ. ಏಕಕ್ಕೆಂದರೆ ಅವರು ಸಾವಿರಾರು ಸಂಖ್ಯೆಯಲ್ಲಿ ಇದ್ದಾರೆ. ಇವರು ೩೦೦ ಜನ ಇದ್ದಾರೆ. ಇವರು ಆ ಕಾರ್ಖಾನೆಯ ಉತ್ಪಾದನೆಯನ್ನು ಕೆಡಿಸುವುದಕ್ಕೆ ಪ್ರಯತ್ನ ಮಾಡಿದರೂ ಕೂಡ ಆ ಕಾರ್ಮಿಕರು ಅವರ ಮಾತು ಕೇಳದೆ ಚೆನ್ನಾಗಿ ಕೆಲಸ ಮಾಡಿದ್ದಾರೆ. ಆದಕ್ಕಾಗಿ ನಾನು ಸರ್ಕಾರದ ಪರವಾಗಿ ಕಾರ್ಮಿಕರನ್ನು ಅಭಿನಂದಿಸುತ್ತೇನೆ ಜೊತೆಗೆ ಆಫೀಸರ್ಸ್‌ಗೆ ಇದು ತಕ್ಕುದಲ್ಲ. ಅವರ ಡಿಮ್ಯಾಂಡ್ಸ್ ಸರಿಯೋ ತಪ್ಪೊ ಆ ಬಗ್ಗೆ ಅವರು ಕೆಲವನ್ನು ಒಪ್ಪಬಹುದು ಅಥವಾ ಬಿಡಬಹುದು ಯಾವುದನ್ನು ಚರ್ಚೆ ಮೂಲಕ ಮಾಡಬೇಕೋ ಅದನ್ನು ಮಾಡಬೇಕಾಗುತ್ತದೆ, ಅದು ಬಿಟ್ಟು ಅವರು ಬೇರೆ ರೀತಿಯಲ್ಲಿ ಈ ರೀತಿಯಾದ ಮಾರ್ಗವನ್ನು ಮಾಡುವುದಾದರೆ ಅವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಎನ್ನುವುದನ್ನು ತಿಳಿಸುತ್ತೇನೆ. ನನಗೆ ಬಂದಿರುವ ವರ್ತಮಾನದ ಪ್ರಕಾರ ಅಲ್ಲಿ ವಾತಾವರಣವನ್ನು ಕೆಡಿಸುವ ಕೆಲವೇ ಜನರು ಇದ್ದು ಅವರ ಪ್ರಚೋದನೆಯಿಂದ ಇಂತಹ ಒಂದು ಪರಿಸ್ಥಿತಿ ಆಯಿತು. ಈಗ ಅಲ್ಲಿ ಪರಿಸ್ಥಿತಿ ಒಂದು ಹತೋಟಿಗೆ ಬರುತ್ತಾ ಇದೆ. ನಾನೂ ಮಾನ್ಯ ಸದಸ್ಯರಲ್ಲಿ ಮನವಿ ಮಾಡಿ ಕೊಳ್ಳುತ್ತೇನೆ. ಅವರು ಅಲ್ಲಿ ಕಾರ್ಖಾನೆಯನ್ನು ಕೆಡಿಸುವ ಪ್ರಸಂಗ ಬರುತ್ತದೆ ಎಂದು ಏನು ಒಂದು ಶಂಕೆಯನ್ನು, ಅನುಮಾನವನ್ನು ಇಟ್ಟು ಕೊಂಡಿದ್ದಾರೋ ಆ ಪ್ರಸಂಗ ಮತ್ತೆ ಬರುವುದಿಲ್ಲ. ಎಂದು ನಾನು ಹೇಳುತ್ತೇನೆ.